ಸಿ.ಸಿ.ನಂ. 324-2012 ಪ್ರಾಸಾ-1

ದಿನಾಂಕಃ 19-01-2023 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಆರೋಪಿ ಪರವಾಗಿ ಶ್ರೀ. ಎಸ್.ಕೆ.ಎಸ್ ವಕೀಲರಿಂದಃ**

1. ನಾವು ಗುಂದಾ ವಲಯ ಕಚೇರಿಯಲ್ಲಿ ಇರುವಾಗ ಸಂಜೆ 5-30 ಗಂಟೆಗೆ ನಿಖರವಾದ ಬಾತ್ಮಿ ಮೌಖಿಕವಾಗಿ ಬಂದಿರುತ್ತದೆ. ಬಾತ್ಮಿಯ ವಿಷಯವನ್ನು ರಿಜಿಸ್ಟರ್‌ನಲ್ಲಿ ಬರೆದಿಲ್ಲ. ಬಾತ್ಮಿ ಬಂದಾಗ ನಾನು ಒಬ್ಬನೇ ಇದ್ದೇನು. ನಮ್ಮ ಕಚೇರಿಯಲ್ಲಿ ಒಟ್ಟು 3 ಜನ ಸಿಬ್ಬಂದಿಗಳು ಇದ್ದೇವೆ. ಬಾತ್ಮಿ ಬಂದಾಗ ಆರ್.ಎಫ್.ಓರವರು ಪೀಲ್ಡ್‌ಗೆ ಹೋಗಿರುತ್ತಾರೆ. ಗಸ್ತಿಗೆ ಹೋಗುವಾಗ ಅವರು ಅದನ್ನು ನಮೂದಿಸಿ ಹೋಗಬೇಕಾಗುತ್ತದೆ ಎಂದರೆ ಸರಿ.
2. ಪಂಚರನ್ನು ಗುಂದಾ ಗ್ರಾಮದಿಂದ ಕರೆಸಿರುತ್ತೇವೆ. ಪಂಚರನ್ನು ವಾಚ್‌ಮನ್‌ರವರು ಕರೆತಂದಿರುತ್ತಾರೆ ಅವರ ಹೆಸರು ನನಗೆ ನೆನಪಿಲ್ಲಾ. ಬಾತ್ಮಿ ಬಂದ ತಕ್ಷಣ ನಾವು ವಾಚ್‌ಮನ್‌ರವರಿಗೆ ಪಂಚರನ್ನು ಕರೆತರಲು ತಿಳಿಸಿರುತ್ತೇವೆ. ಬಾತ್ಮಿ ವಿಷಯವನ್ನು ಆರೋಪಿತರಿಗೆ ತಿಳಿಸಿಲ್ಲ. ಪಂಚರನ್ನು 10 ನಿಮಿಷಗಳಲ್ಲಿ ಕರೆದುಕೊಂಡು ಬಂದಿರುತ್ತಾರೆ.
3. ನಮ್ಮ ಕಚೇರಿಯಿಂದ ಜನತಾ ಪ್ಲಾಟ ಸುಮಾರು 500 ಮೀಟರ್ ದೂರದಲ್ಲಿರುತ್ತದೆ. ಚಾಸಾ 2 ರಿಂದ 5 ಸಿಬ್ಬಂದಿಯವರನ್ನು ಪೀಲ್ಡನಿಂದ ಕರೆಸಿರುತ್ತೇವೆ. ಅವರೆಲ್ಲರೂ ಬೇರೆ ಬೇರೆ ಪ್ರದೇಶಕ್ಕೆ ಹೋಗಿದ್ದರು. ಸಿಬ್ಬಂದಿಯವರನ್ನು ನಮ್ಮ ವಾಚ್‌ಮನ್‌ರವರೇ ಕರೆದುಕೊಂಡು ಬಂದಿರುತ್ತಾರೆ. ಬಾತ್ಮಿ ಬಂದ 10 ನಿಮಿಷದ ಒಳಗೆ ಸಿಬ್ಬಂದಿಯವರುನ್ನು ಕರೆತರಲು ತಿಳಿಸಿರುತ್ತೇನೆ. ವಾಚ್‌ಮನ್‌ರವರು ಮೊದಲಿಗೆ ಸಿಬ್ಬಂದಿಯವರನ್ನು ಕರೆದುತಂದು, ನಂತರ ಪಂಚರನ್ನು ಕರೆ ತಂದಿರುತ್ತಾರೆ. ಅವರು

ಸಿಬ್ಬಂದಿಯವರು 10 ನಿಮಿಷದ ಸಮಯ ಹಿಡಿದಿರುತ್ತದೆ. ನಾವು ಹೋದ ಮನೆಯ ಪಂಚಾಯಿತಿ ಸಂಖ್ಯೆಯನ್ನು ಹೇಳಲು ಆಗುವುದಿಲ್ಲ. ಪಂಚನಾಮೆಯಲ್ಲಿ ಮನೆಯ ಸಂಖ್ಯೆ ನಮೂದಿಸಿಲ್ಲ.

4. ನಾವು 5 ನೇ ಆರೋಪಿಯ ಮನೆಗೆ ಸಂಜೆ 5-45 ರಿಂದ 6-00 ಗಂಟೆಯ ಸುಮಾರಿಗೆ ಹೋಗಿರುತ್ತೇವೆ. ನಾವು ಹೋದಾಗ ಮನೆಯಲ್ಲಿ ಅವರ ಪತ್ನಿ ಇದ್ದು, ಎಷ್ಟು ಜನ ವಾಸವಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು, ಸಿಬ್ಬಂದಿ ಹಾಗೂ ಪಂಚರು ಮನೆಯ ಒಳಗೆ ಹೋಗಿ ತಪಾಸಣೆ ಮಾಡಿರುತ್ತೇನೆ. ಸದ್ರಿ ವಿಷಯವನ್ನು ಪಂಚನಾಮೆಯಲ್ಲಿ ನಮೂದಿಸಿದ್ದೇವೆ. ಮನೆಯ ಒಳಗೆ ಎಷ್ಟು ರೂಮಗಳಿವೆ ಎಂದು ನನಗೆ ಗೊತ್ತಿಲ್ಲ. ನಾವು ಅಡುಗೆ ಮನೆಗೆ ಹೋಗಿರುತ್ತೇವೆ. ಅಡುಗೆ ಮನೆ, ಮನೆಯ ಪೂರ್ವ ದಿಕ್ಕಿನಲ್ಲಿರುತ್ತದೆ.

5. 5 ನೇ ಆರೋಪಿ ಸ್ನಾನದ ಗೃಹದಲ್ಲಿರುದ್ದನ್ನು ನಾನು ನೋಡಿ ಖಾತರಿಪಡಿಸಿಕೊಂಡಿಲ್ಲ. ಮನೆಯ ಒಳಗೆ ಹೋಗಿ ತನಿಖೆ ನಡೆಸಲು ಸುಮಾರು 15 ನಿಮಿಷ ಕಾಲ ತಗಲಿರುತ್ತದೆ. ಮನೆಯ ಸುತ್ತ ಸಿಬ್ಬಂದಿಯವರು ನಿಂತಿದ್ದು, ಯಾರೆಲ್ಲಾ ಯಾವ ದಿಕ್ಕಿನಲ್ಲಿ ನಿಂತಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಪಂಚರು ನಮ್ಮೆಲ್ಲರ ಒಟ್ಟಿಗೆ ಇದ್ದರು. 5 ನೇ ಆರೋಪಿ ಮುಖ್ಯ ದ್ವಾರದಿಂದ ಓಡಿ ಹೋಗಿರುತ್ತಾರೆ. ಮುಖ್ಯ ದ್ವಾರ ಪೂರ್ವ ದಿಕ್ಕಿನಲ್ಲಿ ಇರುತ್ತದೆ. ಚಾಸಾ 2 ಮತ್ತು 3 ರವರು ಪೂರ್ವ ದಿಕ್ಕಿಗೆ ಆರೋಪಿ ಓಡಿ ಹೋಗುವುದನ್ನು ನೋಡಿರುತ್ತಾರೆ. ಏಸೆದು ಹೋದ ಪಾತ್ರೆಯ ಅಳತೆಯನ್ನು ಹೇಳಲು ಆಗುವುದಿಲ್ಲ. ಸದ್ರಿ ಪಾತ್ರೆ ಅಲ್ಯೂಮಿನಿಯಂ ಬಿಳಿ ಬಣ್ಣದ ಸುಮಾರು 5 ಕೆ.ಜಿ ಸಾಮರ್ಥ್ಯದ ಪಾತ್ರೆಯಾಗಿತ್ತು. ನಾನು ಹಾಗೂ ಉಳಿದ

ಸಿಬ್ಬಂದಿಗಳು 5 ನೇ ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿರುತ್ತೇನೆ. ಸುಮಾರು 15-20 ಅಡಿ ದೂರದಷ್ಟು ಅವರನ್ನು ಹಿಡಿಯಲು ಹೋಗಿರುತ್ತೇವೆ.

6. ಸದ್ರಿ ಮಾಂಸ ಅರೆಬೆಂದಾ ಮಾಂಸವಾಗಿದ್ದು, ಸುಮಾರು 2-3 ಕೆ.ಜಿ. ಯಷ್ಟು ಇತ್ತು, ಸದ್ರಿ ಮಾಂಸ ಚೆಲ್ಲಾಪಿಲ್ಲಿಯಾಗಿತ್ತು, ಸದ್ರಿ ಚೆಲ್ಲಾಪಿಲ್ಲಿಯಾದ ಮಾಂಸ ಮನೆಯಿಂದ 15-20 ಅಡಿ ದೂರದಲ್ಲಿ ಇತ್ತು, ಸದ್ರಿ ಸ್ಥಳ ಮಣ್ಣಿನ ಹಿತ್ತಲುಯಾಗಿರುತ್ತದೆ. ಅದರಲ್ಲಿ ನೀರಿನ ಅಂತ ಇರಲಿಲ್ಲ, ಮಾಂಸದ ತುಂಡುಗಳಿಗೆ ಮಣ್ಣಿನ ಅಂಶ ತಾಗಿತ್ತು. ಸದ್ರಿ ಎಲ್ಲಾ ಅಂಶವನ್ನು ಪಂಚನಾಮೆಯಲ್ಲಿ ಬರೆದಿರುತ್ತೇವೆ.

7. ಸದ್ರಿ ಮಾಂಸ ಎಷ್ಟು ತೂಕ ಇತ್ತು ಎಂದು ತೂಕ ಮಾಡಿ ನೋಡಿಲ್ಲ, ಮಾಂಸ, ಪಾತ್ರೆಯನ್ನು ತೋರಿಸಲು ಪೋಟೋವನ್ನು ಹಾಜರುಪಡಿಸಿರತ್ತೇವೆ. ಜಪ್ತುಪಡಿಸಿಕೊಂಡ ವಿಚಾರವನ್ನು ಪಂಚನಾಮೆಯಲ್ಲಿ ನಮೂದಿಸಿದ್ದೇವೆ. ಜಪ್ತುಪಡಿಸಿಕೊಂಡು ಮಾಂಸದ ಮೇಲೆ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿಲ್ಲ, ನನಗೆ ಸದ್ರಿ ಮನೆಯ ಯಾವ ಯಾವ ಭಾಗದಲ್ಲಿ ಯಾವೆಲ್ಲಾ ವಸ್ತುಗಳು ಇದ್ದವು ಎಂದು ಹೇಳಲು ಆಗುವುದಿಲ್ಲ, ಸಾಂಬಾರ ಮಾಡಿದ ಮಾಂಸ ಅಡುಗೆ ಮನೆಯಲ್ಲಿ ಸಿಕ್ಕಿರುತ್ತದೆ. ಸದ್ರಿ ಪಾತ್ರೆ 3-4 ಕೆ.ಜಿ ಸಾಮಾರ್ಥ್ಯದಾಗಿರುತ್ತದೆ. ಸದ್ರಿ ಮಾಂಸ ಅಡುಗೆ ಮನೆಯ ಕಟ್ಟಿಗೆಯ ಓಲೆಯ ಬಳಿ ಇತ್ತು, ಸದ್ರಿ ಪಾತ್ರೆಯಲ್ಲಿ ಅಂದಾಜು 5 ಕೆ.ಜಿಯಷ್ಟು ಮಾಂಸ ಇತು. ಸದ್ರಿ ಮಾಂಸವು ಸಹ ಅಲ್ಯೂಮಿನಿಯಂ ಪಾತ್ರೆಯಲ್ಲಿ ಇತ್ತು, ಅದರ ಮೇಲೆ ಮುಚ್ಚಳ ಇರಲಿಲ್ಲ, ಸದ್ರಿ ಮಾಂಸ ಸ್ವಲ್ಪ ತಿಳುವಾಗಿ ಇತ್ತು.

8. ಶೋಧನೆಯ ಸವಯದಲ್ಲಿ ಮನೆಯಲ್ಲಿ ಎಷ್ಟು ಜನರಿದ್ದರು ಎಂದು ತಿಳಿದುಕೊಂಡಿಲ್ಲ, ಸಾಂಬಾರನ್ನು ಪಾತ್ರೆಯ ಸಮೇತ ಜಪ್ತುಪಡಿಸಿಕೊಂಡಿರುತ್ತೇವೆ. ಸದ್ರಿ ಅಂಶವನ್ನು ಪಂಚನಾಮೆಯಲ್ಲಿ ನಮೂದಿಸಿದ್ದೇವೆ. ಶೋಧನೆಯಾದ ಸುಮಾರು ಅರ್ಧ ಗಂಟೆಯ

ಕಾಲ ಮನೆಯಲ್ಲಿ ಇದ್ದೇವು. ಅದಕ್ಕೆ ಪಂಚರ ಸಹಿವುಳ್ಳ ಚೀಟಿಯನ್ನು ಹಚ್ಚಿರುತ್ತೇವೆಂದು ನನಗೆ ನೆನಪಿಲ್ಲಾ.

9. ನಂದ್ದಿಗದ್ದೆ ಘಟನಾಸ್ಥಳದಿಂದ ಸುಮಾರು 1 ಕಿಲೋ ಮೀಟರ್ ದೂರದಲ್ಲಿದೆ. 5 ನೇ ಆರೋಪಿಯಿಂದ 2 ನೇ ಆರೋಪಿಯ ಮನೆಯ ಹೋಗುವ ರಸ್ತೆ ಜನ ವಸತಿಯಿಂದ ಕೂಡಿದೆ. 5 ನೇ ಆರೋಪಿಯ ಮನೆಯ ಸುತ್ತಲೂ ತೋಟ ಇದೆ. 5 ನೇ ಆರೋಪಿಯ ಮನೆಯಿಂದ ಸುಮಾರು 6-00 ಗೆ ಹೊರಟಿರುತ್ತೇವೆ. 2 ನೇ ಆರೋಪಿಯ ಮನೆಯ ಪಂಚಾಯಾತ ಮನೆಯ ಸಂಖ್ಯೆಯನ್ನು ಹೇಳಲು ಆಗುವುದಿಲ್ಲ. ಸದ್ರಿ ಸಂಖ್ಯೆಯನ್ನು ಪಂಚನಾಮೆಯಲ್ಲಿ ನಮೂದಿಸಿಲ್ಲ. 2 ನೇ ಆರೋಪಿಯ ಮನೆಯಿಂದ 50-60 ಮೀಟರ್ ದೂರದಲ್ಲಿ ತೋಟ ಇತ್ತು. ವಾಹನ ಸಮೇತ 2 ನೇ ಆರೋಪಿಯ ಮನೆಗೆ ಹೋಗಿರುತ್ತೇವೆ. 2 ನೇ ಆರೋಪಿ ನಮ್ಮ ವಾಹನವನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿರುವುದಿಲ್ಲ. ಸದ್ರಿ ವಿಷಯವನ್ನು ತೋಟದಲ್ಲಿ ಹೋಗಿ ಅವರಿಗೆ ತಿಳಿಸಿರುತ್ತೇವೆ. 2 ನೇ ಆರೋಪಿಯಲ್ಲಿ ಎಷ್ಟು ಜನರಿದ್ದರು ಎಂದು ನಾನು ನೋಡಿಲ್ಲ. ಸದ್ರಿ ಮನೆಯ ಒಳಗೆ ಹೋಗಿ ಪರಿಶೀಲನೆ ಮಾಡಿರುತ್ತೇವೆ. ಮನೆಯಲ್ಲಿ ಎಷ್ಟು ಕೋಣೆಗಳು ಇದ್ದವು ಎಂದು ಗೊತ್ತಿಲ್ಲ. ಅಲ್ಲಿ ಸಹ ನಾವೆಲ್ಲರೂ ಹೋಗಿ ಪರಿಶೀಲನೆ ಮಾಡಿರುತ್ತೇವೆ. ಸದ್ರಿ ಮನೆಯು ಹಂಚಿನಾದ್ದಾಗಿತ್ತು. ಅದನ್ನು ಪಂಚನಾಮೆಯಲ್ಲಿ ಬರೆದಿಲ್ಲ. ಸದ್ರಿ ಮನೆಯಲ್ಲಿ ಸುಮಾರು ಅರ್ಧ ಗಂಟೆ ಕಾಲ ಇದ್ದೇವು. ಮನೆಯನ್ನು ಶೋಧನೆ ಮಾಡಲು ಸುಮಾರು ಅರ್ಧ ಗಂಟೆ ಕಾಲ ಹಿಡಿದಿರುತ್ತದೆ. ಯಾವ ಯಾವ ಕೋಣೆಯಲ್ಲಿ ಯಾವ ಯಾವ ವಸ್ತುಗಳು ಇದ್ದವು ಎಂದು ಹೇಳಲು ಆಗುವುದಿಲ್ಲ. ಮನೆಯನ್ನು ಶೋದನೆ ಮಾಡುತ್ತಿದ್ದಾಗ ಒಬ್ಬ ವ್ಯಕ್ತಿ

ಪಶ್ಚಿಮ ದಿಕ್ಕಿನ ತೋಟದ ಕಡೆಯಿಂದ ಓಡಿ ಬಂದಿರುತ್ತಾನೆ. ತೋಟವು ಮನೆಯ ಅಂಚಿನಲ್ಲಿ ಇರುತ್ತದೆ.

10. 2 ನೇ ಆರೋಪಿ ಮಾಂಸವನ್ನು ತೋರಿಸುವುದಾಗಿ ತಿಳಿಸಿರುತ್ತಾರೆ. ಓಡಿ ಬಂದ ವ್ಯಕ್ತಿಯ ಹೆಸರು ಬೇಜಮಿ. ಓಡಿ ಬರುತ್ತಿದ್ದ ವ್ಯಕ್ತಿಯನ್ನು ಮನೆಯಿಂದ ಸುಮಾರು 15-20 ಮೀಟರದಿಂದ ದೂರದಲ್ಲಿ ಹಿಡಿದಿರುತ್ತೇವೆ. ಮನೆಯಿಂದ 15 ಮೀಟರ ದೂರದಲ್ಲಿ 2 ಮೀಟರ್ ವಿಸ್ತೀರ್ಣದಲ್ಲಿ ಮಾಂಸ ಚೆಲ್ಲಾಪಲ್ಲಿಯಾಗಿ ಬಾಳೆ ತೋಟದಲ್ಲಿ ಬಿದ್ದಿತ್ತು, ಸದಿರ ಮಾಂಸಕ್ಕೆ ಮಣ್ಣು ತಾಗಿರುವುದಿಲ್ಲ. ಸದ್ರಿ ಮಾಂಸ 3 ಕೆ.ಜಿ ಇತ್ತು, ಸದ್ರಿ ಮಾಂಸ ಹಸಿಯಾಗಿತ್ತು, ಬಿದ್ದ ಮಾಂಸದಿಂದ 3-5 ಮೀಟರ್ ದೂರದಲ್ಲಿ ಡಬ್ಬಿ ಬಿದ್ದಿತ್ತು, ಸದ್ರಿ ಡಬ್ಬಿ 2 ಕೆ.ಜಿ ಸಾಮಾರ್ಥ್ಯದಾಗಿತ್ತು, ಸದ್ರಿ ಡಬ್ಬಿಯಲ್ಲಿ 2 ಕೆ.ಜಿ ಮಾಂಸವಿತ್ತು, ಸದ್ರಿ ವಸ್ತುಗಳನ್ನು ಜಪ್ತುಪಡಿಸಿಕೊಂಡ ವಿಷಯವನ್ನು ಪಂಚನಾಮೆಯಲ್ಲಿ ಬರೆದಿರುತ್ತೇವೆ. ಜಪ್ತುಪಡಿಸಿಕೊಂಡ ವಸ್ತುಗಳ ಮೇಲೆ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತೇವೋ ನನಗೆ ನೆನಪಿಲ್ಲಾ.

11. 5 ನೇ ಆರೋಪಿಯ ಮನೆಯ ಹತ್ತಿರ ಚೆಲ್ಲಾಪಿಲಿಯಾಗಿ ಬಿದ್ದ ಮಾಂಸ ಹಾಗೂ ಡಬ್ಬಿಯ ಫೋಟೋಗಳನ್ನು ತೆಗೆದಿರುತ್ತೇವೆ. ನನಗೆ ಈಗ ತೋರಿಸಿದ ಪೋಟೋಗಳಲ್ಲಿ ಸದ್ರಿ ಫೋಟೋ ಯಾವುದು ಎಂದು ಹೇಳಲು ಆಗುವುದಿಲ್ಲ. ನಿಪಿ 8 ರಲ್ಲಿ ಮಾಂಸವನ್ನು ಪ್ಲಾಸ್ಟಿಕ ಕವರನಲ್ಲಿ ತುಂಬಲಾಗಿರುವುದು ಕಂಡು ಬರುತ್ತದೆ ಎಂದರೆ ಸರಿ. ನಿಪಿ 7 ರಲ್ಲಿ ಕಾಣುವ ಪಾತ್ರೆ 5 ಕೆ. ಜಿ ಸಾಮಾರ್ಥ್ಯದ್ದು ಅಲ್ಲ ಎಂದರೆ ಸರಿ. ಸದ್ರಿ ಪಾತ್ರೆ ಬಹಳ ಚಿಕ್ಕ ಪಾತ್ರೆ ಎಂದರೆ ಸರಿ. ಸದ್ರಿ ಪಾತ್ರೆಯು ಜಪ್ತುಡಿಸಿಕೊಂಡ ಪಾತ್ರೆಯಲ್ಲ ಎಂದರೆ ಸರಿ. ನಿಪಿ 4 ರಿಂದ 31 ರಲ್ಲಿ ಫೋಟೋಗಳಲ್ಲಿ ಎಲ್ಲಿಯೂ ಸ್ಟೀಲ್ ಡಬ್ಬಿ ಕಾಣುವುದಿಲ್ಲ ಎಂದರೆ ಸರಿ.

(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ  ಕೋರಿದ್ದು, ಸಮಯ ನೀಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ದಾಂಡೇಲಿ.